೧೮)	ಮೆ: ಕರ್ನಾಟಕ ಟ್ರೇಡರ್ಸ್ ಮಂಗಳೂರು.	೬೨-೬೩ ರಿಂದ	೬೩-೬೪ ರೂ. ೩೪,೬೦೨-೨೩
೧೯)	ಎಂ.ಎ. ಪಕೀರ್ ಸುಪಾರಿ ಮರ್ಚೆಂಟ್, ಬೆಂಗಳೂರು.	೬೬-೬೭	ರೂ. ೯,೫೧೭-೮೫
೨೦)	ಮೆ:ತ್ರಿಪುರ ಎಂಟರ್ ಪ್ರೈಸಸ್, ಗುಲ್ಬರ್ಗ.	೭೯-೮೦ರಿಂದ ೮೦-೮೧	ರೂ. ೮,೬೯೮-೭೯
೨೧)	ಮೆ:ಎಂ.ಎನ್.ಆರ್. ಮಲ್ಯ ಆಂಡ್ ಕೋ, ಮಂಗಳೂರು.	೭೫-೭೬	ರೂ. ೧೮,೧೪೪-೭೯
೨೨)	ಮೆ:ಸರ್ವೋದಯ ಕುಂಬಾರರ ಕೋ. ಪ್ರೊಡ್ಯೂಸರ್ಸ್ ಸೊ.ಲಿ. ಮುಗದ	೮೬-೮೭ ರಿಂದ ೮೭-೮೮	ರೂ. ೪೭,೭೬೪-೦೦

ವಿಷಯ:- ನ್ಯಾಯ ಬೆಲೆ ಅಂಗಡಿಗಳಲ್ಲಿರುವ ಫೋಟೊ ರೇಶನ್ ಕಾರ್ಡ್‌ಗಳ ತಪಾಸಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೫:- (೧೮೯)
ಶ್ರೀ. ಗುರುಪಾದಪ್ಪ ನಾಗ್ಮಾರಪಲ್ಲಿ (ಬಿರಾದ್)
ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಬೆಲೆ ಅಂಗಡಿಗಳಲ್ಲಿ ಹಾಗೂ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮದವರು ನಡೆಸುತ್ತಿರುವ ಮಳಿಗೆಗಳಲ್ಲಿ ಫೋಟೊ ರೇಷನ್ ಕಾರ್ಡುಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಹಾವಳಿಯನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಹಾವಳಿಯನ್ನು ತಪ್ಪಿಸಲು ಆಹಾರ ಇಲಾಖೆಯು ಜಾಗೃತ ದಳವನ್ನೇನಾದರೂ ರಚಿಸಿದೆಯೇ?

ಈ) ಹಾಗಿದ್ದಲ್ಲಿ, ಈ ಜಾಗೃತ ದಳವು ಕಳೆದ ವರ್ಷ ಅಂಗಡಿಗಳ ಮೇಲೆ ದಾಳಿ ಮಾಡಿ ಎಷ್ಟು ಫೋಟೊ ಪಡಿತರ ಚೀಟಿಗಳನ್ನು ವಶಪಡಿಸಿಕೊಂಡಿದೆ?

ಶ್ರೀಮತಿ ಮನೋರಮ ಮಧ್ವರಾಜ್
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ.

ಸರ್ಕಾರವು ಬೃಹತ್ ಪ್ರಮಾಣದಲ್ಲಿ ಕೂಲಂಕುಷವಾಗಿ ಪಡಿತರ ಚೀಟಿಗಳ ತನಿಖೆಯನ್ನು ಕೈಗೊಂಡಿರುತ್ತ ಇಲ್ಲಿಯವರೆಗೆ, ೫೮,೧೧೮ ಹೆಚ್ಚುವರಿ (ಬೋಗಸ್) ಕಾರ್ಡುಗಳನ್ನು ಗುರುತಿಸಿ ರದ್ದುಪಡಿಸಲಾಗಿದೆ.

ಇಲ್ಲ.

ಉದ್ಭವಿಸುವುದಿಲ್ಲ.